## KARNATAKA LOKAYUKTA

No.UPLOK-1/DE.452/2017/ARE-13

Multi Storied Building,
Dr. B.R. Ambedkar Veedhi,
Bengaluru-560 001.
Dated 30.06.2022.

## RECOMMENDATION

Sub:- Departmental inquiry against (1) Sri Yerrappa Reddy, Executive Engineer, Byatarayanapura Division, (2) Sri Rajanikanth Malli, Asst.Executive Engineer, Kodigehalli Sub-division, BBMP, (3) Sri Basavaraj, Assistant Engineer, BBMP, Bengaluru– reg.

Ref:- (1)Government Order No.UDD 42 MNU 2017 dt.22.02.2017.

2) Nomination order No. UPLOK-1/DE.452/2017 dated 27.03.2017 of Hon'ble Upalokayukta, State of Karnataka.

3) Inquiry report dated 29.06.2022 of Additional Registrar of Enquiries-13, Karnataka Lokayukta, Bengaluru.

~~~~~~

The Government by order dated 22.02.2017, initiated the disciplinary proceedings against (1) Sri Yerrappa Reddy, Executive Engineer, Byatarayanapura Division, (2) Sri Rajanikanth Malli, Asst.Executive Engineer, Kodigehalli Sub-division, BBMP, (3) Sri Basavaraj, Assistant Engineer, BBMP, Bengaluru, [hereinafter referred to as Delinquent Government Officers, for short as
~~~~~~

'DGOs 1 to 3' respectively ] and entrusted the Departmental Inquiry to this Institution.

2. This Institution by Nomination Order No. UPLOK-1/DE.452/2017 dated 27.03.2017 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, the matter was transferred to the Additional Registrar of Enquiries-13 to continue the said inquiry.

3. The DGOs were tried for the charge of not taking action against illegal construction of building in violation of sanctioned plan by one Mahadevappa and thereby committing misconduct.

4. The Inquiry Officer (Additional Registrar of Enquiries-13) on proper appreciation of oral and documentary evidence has held that, the Disciplinary Authority has ' *not proved*' the

above charge against the DGO 1 Sri Yerrappa Reddy, Executive Engineer, DGO 2 Sri Rajanikanth Malli, Asst. Executive Engineer, and DGO 3 Sri Basavaraj, Assistant Engineer.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO 1 Sri Yerrappa Reddy, Executive Engineer, Byatarayanapura Division, DGO 2 Sri Rajanikanth Malli, Asst. Executive Engineer, Kodigehalli Sub-division, BBMP, and DGO 3 Sri Basavaraj, Assistant Engineer, BBMP, Bengaluru, of the charges leveled against them.

6. Action taken in the matter shall be intimated to this Authority.

Connected records are enclosed herewith.

3/10

**(JUSTICE K.N.PHANEENDRA)**
Upalokayukta,
State of Karnataka.

# KARNATAKA LOKAYUKTA

No.UPLOK-1/DE/452/2017/ARE-13

M.S. Building,
Dr. B.R. Ambedkar Road,
Bangalore-560 001,
Date: 29-06-2022.

**: Present:**

**(Shobha S)**
Additional Registrar Enquiries-13,
Karnataka Lokayukta,
Bangalore.

## :: ENQUIRY REPORT ::

**Sub**:- Departmental Inquiry against

1. Sri. Yerrappa Reddy, Executive Engineer, Bytaranapura Division.

2. Sri. Rajanikanth Malli, Assistant Exccutive Engineer, Kodigehalli Sub-Division, Sahakara Nagara BBMP Office, Bengaluru Urban District.

3. Sri. Basavaraj, Assistant Engineer, Sahakara Nagara BBMP Office, Bengaluru Urban District - reg.

**Ref** :- 1) Govt. Order No. ನಅಇ 42 ಎಂಎನ್‌ಯು 2017, ಬೆಂಗಳೂರು, dated: 22/02/2017.

2) Nomination Order No.UPLOK-1/DE/
452/2017, Bengaluru, dated: 27/03/2017.

*****

1. This Departmental Enquiry is initiated against 1. Sri. Yerrappa Reddy, Executive Engineer, Bytaranapura Division, 2. Sri. Rajanikanth Malli, Assistant Executive Engineer, Kodigehalli Sub- Division, Sahakara Nagara BBMP Office, Bengaluru Urban District, 3. Sri. Basavaraj, Assistant Engineer, Ward No.7, Sahakara Nagara BBMP Office, Bengaluru Urban District (herein after referred to as the Delinquent Government Officials in short D.G.Os. respectively)

2. After completion of investigation a report U/s 12(3) of the Karnataka Lokayukta Act was sent to the Government as per Reference No-1.

3. In view of the Government Order cited above at reference No.2, the Hon'ble Upalokayukta-1 vide Order No: UPLOK-1/DE/452/2017 dated: 27/03/2017, nominated Additional Registrar of Enquiries-4 of the office of the Karnataka Lokayukta and the enquiry officer to frame charges and to conduct enquiry against the aforesaid DGOs. Additional Registrar Enquiries-4 prepared Articles of Charges, Statement of Imputations of misconduct, list of documents proposed to be

relied and list of witnesses proposed to be examined in support of Articles of Charges. Copies of same were issued to the DGOs calling upon them to appear before this Authority and to submit written statement of their defence.

4. As per the order of Hon'ble UPLOK-1 & 2/DE/Transfers/2018 of Registrar, Karnataka Lokayukta dated: 06/08/2018 this enquiry file is transferred from ARE-4 to ARE-13.

5. The Articles of Charge as framed by ARE-4 against DGOs is as below:

**ಅನುಬಂಧ-1**

**ದೋಷಾರೋಪಣೆ**

6. ನೀವು/1ನೇ ಆಪಾದಿತ ಸರ್ಕಾರಿ ನೌಕರ/1) ಶ್ರೀ. ಯರ್ರಪ್ಪ ರೆಡ್ಡಿ, ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, 2) ಶ್ರೀ ರಜನಿಕಾಂತ ಮಲ್ಲಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಡಿಗೇಹಳ್ಳಿ ಉಪವಿಭಾಗ, ಸಹಕಾರ ನಗರ ಬಿಬಿಎಂಪಿ ಕಚೇರಿ, ಬೆಂಗಳೂರು ನಗರ ಜಿಲ್ಲೆ ಹಾಗೂ 3) ಶ್ರೀ ಬಸವರಾಜ್, ಸಹಾಯಕ ಅಭಿಯಂತರರು, ಸಹಕಾರ ನಗರ ಬಿಬಿಎಂಪಿ ಕಚೇರಿ, ಬೆಂಗಳೂರು ನಗರ ಜಿಲ್ಲೆ ಆದ ನೀವು, ನಿವೇಶನ ಸಂ: 546 ಶ್ರೀ ಮಹದೇವಪ್ಪ ಎಂಬುವವರ ಹೆಸರಿನಲ್ಲಿದ್ದು, ಸದರಿ ನಿವೇಶನದ ಮಾಲೀಕರಾಗಿದ್ದಾರೆ. ಸದರಿ ಕಟ್ಟಡದ ಮಾಲೀಕರು ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ಬಿಬಿಎಂಪಿ ಅನುಮತಿ ಮತ್ತು ಮಂಜೂರಾತಿ ನಕ್ಷೆ ಪಡೆಯದೇ ಕಟ್ಟಡ ನಿರ್ಮಿಸಿದ್ದು, ಈ ಬಗ್ಗೆ ದೂರುದಾರರು ನಿಮ್ಮ - ಆಪಾದಿತ ಸರ್ಕಾರಿ ನೌಕರರ ಕಚೇರಿಗೆ ದೂರು ಸಲ್ಲಿಸಿದ್ದು, ಆ ಪ್ರಕಾರ 2 ಮತ್ತು 3ನೇ ಆಪಾದಿತ ಸರ್ಕಾರಿ ನೌಕರರು ಸ್ಥಳ

ಪರಿಶೀಲಿಸಿ, 2ನೇ ಆಪಾದಿತ ಸರ್ಕಾರಿ ನೌಕರರು ದಿನಾಂಕ: 12/01/2016 ರಂದು ಕೆಎಂಸಿ ಕಾಯ್ದೆ, ಕಲಂ 308 ರಡಿ ದಾಖಲೆಗಳನ್ನು ಹಾಜರುಪಡಿಸುವಂತೆ ಸದರಿ ಕಟ್ಟಡದ ಮಾಲೀಕರಿಗೆ ದಾಖಲೆಗಳನ್ನು ಹಾಜರುಪಡಿಸಲು ನೋಟೀಸ್ ನೀಡಿದ್ದು, ದಾಖಲೆಗಳನ್ನು ಹಾಜರುಪಡಿಸದಿದ್ದರಿಂದ, ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿರುವುದನ್ನು ಗಮನಿಸಿ, ಅನಧಿಕೃತ ಭಾಗಗಳನ್ನು ತೆರವುಗೊಳಿಸುವಂತೆ ದಿನಾಂಕ: 22/03/2016 ರಂದು ಕೆಎಂಸಿ ಕಾಯ್ದೆ, ಕಲಂ 321(1) ಮತ್ತು (2) ರಡಿ ತಾತ್ಕಾಲಿಕ ಆದೇಶ ಹೊರಡಿಸಿದ್ದು, ನಂತರ ದಿನಾಂಕ : 01/04/2016 ರಂದು ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಸ್ಥಿರೀಕರಣ ಆದೇಶ ಹೊರಡಿಸಲಾಗಿದ್ದು, ಆದರೂ ಸಹ ಅನಧೀಕೃತ ಭಾಗಗಳನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. 2 ಮತ್ತು 3 ನೇ ಆಪಾದಿತ ಸರ್ಕಾರಿ ನೌಕರರು ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಕೋರಿ ಕೆಎಂಸಿ ಕಾಯ್ದೆ, ಕಲಂ 462 ರಡಿ ಮನವಿ ಸಲ್ಲಿಸಬೇಕಾಗಿದೆ. ಆದರೆ ಆಪಾದಿತ ಸರ್ಕಾರಿ ನೌಕರರು ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಸದರಿ ಕಟ್ಟಡವನ್ನು ನಕ್ಷೆಗೆ ವಿರುದ್ಧವಾಗಿ ನಿರ್ಮಿಸಿರುವ ವಿಚಾರ ನಿಮಗೆ-1 ರಿಂದ 3 ನೇ ಆಪಾದಿತ ಸರ್ಕಾರಿ ನೌಕರರಿಗೆ ಗೊತ್ತಿದ್ದರೂ ಸಹ ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ನೀವು-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಕರ್ತವ್ಯ ಲೋಪವೆಸಗಿರುತ್ತೀರಿ. ನೀವು-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ಸೇವಕರಾಗಿದ್ದು, ನಿಮ್ಮಗಳ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 3(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ.

**ಅನುಬಂಧ–2**
**ದೋಷಾರೋಪಣೆಯ ವಿವರ**
**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡಕ್ಟ್)**

7. ಬೆಂಗಳೂರು ನಗರ ಜಿಲ್ಲೆ, ಚಾಮರಾಜಪೇಟೆ 3ನೇ ಕ್ರಾಸ್, 2ನೇ ಮುಖ್ಯ ನಂ.147 ರ ನಿವಾಸಿಯಾದ ಶ್ರೀ. ಪ್ರಗತಿ ಕೆ ವೆಂಕಟೇಶ ಬಾಬು (ಇನ್ನು ಮುಂದೆ "ದೂರುದಾರರು" ಎಂದು ಸಂಬೋಧಿಸಲಾಗುವ) ರವರು ದೂರನ್ನು ಈ ಸಂಸ್ಥೆಗೆ ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

8. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ನಗರ ಶಂಕರ ನಗರದ ಎಫ್–ಬ್ಲಾಕ್ 4ನೇ ಹಂತ ನಿವೇಶನ ಸಂ: 546 ರ ಮಾಲೀಕರು ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದ್ದು, ಈ ಬಗ್ಗೆ ನಿಮಗೆ–1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಜರುಗಿಸಿಲ್ಲ. ಸದರಿ ಕಟ್ಟಡದ ಮಾಲೀಕರು ಬಿಬಿಎಂಪಿಯ ಮಂಜೂರಾತಿ ನಕ್ಷೆ ಪಡೆದಿಲ್ಲ ಮತ್ತು ಹೆಚ್ಚು ಮಹಡಿಗಳನ್ನು ನಿರ್ಮಿಸುತ್ತಿದ್ದಾರೆಂದು ಹೇಳಿದ್ದರು.

9. ದೂರಿಗೆ ನಿಮ್ಮಿಂದ–1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ನೀವು–1ನೇ ಆಪಾದಿತ ಸರ್ಕಾರಿ ನೌಕರರು ನಿಮ್ಮ ಆಕ್ಷೇಪಣೆಯಲ್ಲಿ –

ಸದರಿ ಕಟ್ಟಡದ ನಿರ್ಮಾಣ ಹಂತದಲ್ಲಿರುವ ಕಟ್ಟಡ ಮಾಲೀಕರಿಗೆ ದಿನಾಂಕ: 12/02/2016 ರಂದು ಕೆ.ಎಂ.ಸಿ., ಕಾಯಿದೆ, ಕಲಂ 308 ರಡಿ ನೋಟೀಸ್ ಜಾರಿ ಮಾಡಲಾಗಿದ್ದು, ಆದರೆ, ಈ ಬಗ್ಗೆ ಯಾವುದೇ ಉತ್ತರ ಬಂದಿಲ್ಲ. ಆ ನಂತರ ದಿನಾಂಕ: 22/03/2016 ರಂದು ಕೆಎಂಸಿ ಕಾಯಿದೆ, ಕಲಂ 321(1) ಮತ್ತು (2) ರಡಿ ತಾತ್ಕಾಲಿಕ ಮತ್ತು ಅಂತಿಮ ಆದೇಶವನ್ನು ಸದರಿ ಕಟ್ಟಡದ ಮಾಲೀಕರಿಗೆ ಹೊರಡಿಸಲಾಗಿದೆ ಎಂದು, ಆದರೆ ಸದರಿ ಕಟ್ಟಡದ ಮಾಲೀಕರು ಯಾವುದೇ ಕ್ರಮ

ಕೈಗೊಳ್ಳದಿರುವುದರಿಂದ ಕೆಎಂಸಿ ಕಾಯಿದೆ, ಕಲಂ 462 ರಡಿ ಸದರಿ ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸುವಂತೆ 2ನೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ: 11/05/2016 ರಂದು ಅಂತಿಮ ನೋಟೀಸ್ ನೀಡಲಾಗಿದ್ದು, ಇದರಲ್ಲಿ ನಿಮ್ಮದು ಯಾವುದೇ ಕರ್ತವ್ಯ ಲೋಪವಾಗಿಲ್ಲವೆಂದು ತಿಳಿಸಿರುತ್ತೀರಿ.

10. 2 ಮತ್ತು 3 ಆಪಾದಿತ ಸರ್ಕಾರಿ ನೌಕರರು ನಿಮ್ಮಗಳ ಆಕ್ಷೇಪಣೆಯಲ್ಲಿ–

ಸದರಿ ದೂರಿಗೆ ಸಂಬಂಧಪಟ್ಟಂತೆ, ದಿನಾಂಕ: 12/01/2016 ರಂದು ಕೆಎಂಸಿ ಕಾಯಿದೆ, ಕಲಂ 308 ರಡಿ ನೋಟೀಸ್ ಜಾರಿ ಮಾಡಲಾಗಿದ್ದು, ನಂತರ ದಿನಾಂಕ: 22/03/2016 ರಂದು ತಾತ್ಕಾಲಿಕ ಮತ್ತು ಅಂತಿಮ ಆದೇಶವನ್ನು ಸದರಿ ಕಟ್ಟಡದ ಮಾಲೀಕರಿಗೆ ಹೊರಡಿಸಲಾಗಿದೆ ಎಂದು ಆದರೂ ಸಹ ಸದರಿ ಕಟ್ಟಡದ ಮಾಲೀಕರು ಅನಧೀಕೃತ ಭಾಗಗಳನ್ನು ತೆರವುಗೊಳಿಸಿರುವುದಿಲ್ಲ ವೆಂದು ತಿಳಿಸಿರುತ್ತೀರಿ.

11. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ನಿಮ್ಮ–1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನಲ್ಲಿಯ ಅಂಶಗಳನ್ನೇ ಪುರರಚ್ಚರಿಸಿದ್ದಾರೆ.

12. **ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇ**ನೆಂದರೆ:–

ನಿವೇಶನ ಸಂ: 546 ಶ್ರೀ ಮಹದೇವಪ್ಪ ಎಂಬುವವರ ಹೆಸರಿನಲ್ಲಿದ್ದು, ಸದರಿ ನಿವೇಶನದ ಮಾಲೀಕರಾಗಿದ್ದಾರೆ. ಸದರಿ ಕಟ್ಟಡದ ಮಾಲೀಕರು ಕಟ್ಟಡ ನಿರ್ಮಿಸುವ ಸಂದರ್ಭದಲ್ಲಿ ಬಿಬಿಎಂಪಿ ಅನುಮತಿ ಮತ್ತು ಮಂಜೂರಾತಿ ನಕ್ಷೆ ಪಡೆಯದೇ ಕಟ್ಟಡ ನಿರ್ಮಿಸಿದ್ದು, ಈ ಬಗ್ಗೆ ದೂರುದಾರರು ನಿಮ್ಮ ಕಚೇರಿಗೆ ದೂರು ಸಲ್ಲಿಸಿದ್ದು, ಆ ಪ್ರಕಾರ 2 ಮತ್ತು 3 ನೇ ಆಪಾದಿತ ಸರ್ಕಾರಿ ನೌಕರರು ಸ್ಥಳ ಪರಿಶೀಲಿಸಿ, 2ನೇ ಆಪಾದಿತ ಸರ್ಕಾರಿ

ನೌಕರರು ದಿನಾಂಕ: 12/01/2016 ರಂದು ಕೆಎಂಸಿ ಕಾಯಿದೆ, ಕಲಂ 308 ರಡಿ ದಾಖಲೆಗಳನ್ನು ಹಾಜರುಪಡಿಸುವಂತೆ ಸದರಿ ಕಟ್ಟಡದ ಮಾಲೀಕರಿಗೆ ದಾಖಲೆಗಳನ್ನು ಹಾಜರುಪಡಿಸಲು ನೋಟೀಸ್ ನೀಡಿದ್ದು, ದಾಖಲೆಗಳನ್ನು ಹಾಜರುಪಡಿಸದಿದ್ದರಿಂದ, ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸಿರುವುದನ್ನು ಗಮನಿಸಿ, ಅನಧೀಕೃತ ಭಾಗಗಳನ್ನು ತೆರವುಗೊಳಿಸುವಂತೆ ದಿನಾಂಕ: 22/03/2016 ರಂದು ಕೆಎಂಸಿ ಕಾಯ್ದೆ, ಕಲಂ 321(1) ಮತ್ತು (2) ರಡಿ ತಾತ್ಕಾಲಿಕ ಆದೇಶ ಹೊರಡಿಸಿದ್ದು, ನಂತರ ದಿನಾಂಕ: 01/04/2016 ರಂದು ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಸ್ಥಿರೀಕರಣ ಆದೇಶ ಹೊರಡಿಸಲಾಗಿದ್ದು, ಆದರೂ ಸಹ ಅನಧೀಕೃತ ಭಾಗಗಳನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. 2 ಮತ್ತು 3ನೇ ಆಪಾದಿತ ಸರ್ಕಾರಿ ನೌಕರರು ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಕೋರಿ ಕೆಎಂಸಿ ಕಾಯಿದೆ, ಕಲಂ 462 ರಡಿ ಮನವಿ ಸಲ್ಲಿಸಬೇಕಾಗಿದೆ. ಆದರೆ, ಆಪಾದಿತ ಸರ್ಕಾರಿ ನೌಕರರು ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಸದರಿ ಕಟ್ಟಡವನ್ನು ನಕ್ಷೆಗೆ ವಿರುದ್ಧವಾಗಿ ನಿರ್ಮಿಸಿರುವ ವಿಚಾರ ನಿಮಗೆ-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರಿಗೆ ಗೊತ್ತಿದ್ದರೂ ಸಹ ಸದರಿ ಕಟ್ಟಡದ ಅನಧೀಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ನೀವು-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ನಿಮ್ಮ-1 ರಿಂದ 3 ನೇ ಆಪಾದಿತ ಸರ್ಕಾರಿ ನೌಕರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ನಿಮ್ಮಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

14. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ನೀವು-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ನಿಮ್ಮಗಳ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೇ, ಕರ್ತವ್ಯ ಲೋಪವೆಸಗಿ ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತೀರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

15. ಈ ಮೇಲ್ಕಂಡ ಕಾರಣಗಳಿಂದಾಗಿ, 1 ರಿಂದ 3 ನೇ ಆಪಾದಿತ ಸರ್ಕಾರಿ ನೌಕರರಾದ ನಿಮ್ಮಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದು, ನೀವು-1 ರಿಂದ 3ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಸಾಕ್ಷ್ಯದ ಆಧಾರಗಳಿಂದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ 3 (1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನಿಮ್ಮಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ), ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ಪ್ರಾಧಿಕಾರವು ಉಲ್ಲೇಖ ಒಂದರಂತೆ ಈ ಸಂಸ್ಥೆಯಿಂದ ವಿಚಾರಣೆ ಮಾಡಲು ಕೋರಲಾಗಿರುವ ಕಾರಣ ನಿಮ್ಮಗಳ ವಿರುದ್ಧ ಈ ಆಪಾದನೆ.

16. DGOs appeared before this Enquiry Authority on 07/08/2017 their First Oral Statement was recorded U/Rule-11(9) of KCS (CC & A) Rules 1957. The DGOs pleaded not

guilty and they claimed to hold an enquiry. Subsequently the DGOs have not filed their written statement.

17. In order to substantiate the charge the Disciplinary Authority examined one witness as PW-1 and got marked 6 documents as Ex.P-1 to P-6 and closed the evidence.

18. After closing the case of the Disciplinary Authority, the Second Oral Statement of DGOs was recorded as required U/Rule 11 (16) of KCS (CC & A) Rules, 1957 and wherein they have submitted that, the witness have deposed falsely against them.

19. The DGOs themselves examined as DW-1 to 3 and got confronted the documents through PW-1 as Ex.D-1 to Ex.D-13 and closed their side. Since the DGOs got themselves examined as DW-1 to 3, the questioning of the DGOs as required U/R 11(18) of KCS (CC & A) rules, 1957 was dispensed.

20. When the case was posted for submission of written brief, the DGOs submitted written brief and in addition to the arguments submitted by them was heard and Presenting Officer also submitted his oral arguments.

21. Upon consideration of the charges leveled against the DGOs, the evidence led by the Disciplinary Authority and the DGOs by way of oral and documentary evidence and their written submission, the only point that arise for my consideration is as under:-

**(1)Whether the Disciplinary Authority successfully proved the charges leveled against the DGOs?**

**(2) What Finding?**

22. My findings to the above point No-1 is held :

i) In the Negative.

ii) Point No-2 As per final findings.

**REASONS**

23. The case of the Disciplinary Authority is brief in that,

The complainant Sri. Pragathi K Ventakesh Babu R/o No.147, 2nd main, 3rd cross, Chamarajpet, Bengaluru-18 has lodged the complaint to the Hon'ble Lokaukta on 22/02/2016

as per Ex.P-3 he is examined as PW-1 he has reiterated the facts stated in the complaint.

24. PW-1 states that he is a permanent resident of Chamarajpet, Bengaluru and the DGOs have not taken any timely action with respect to the illegal construction in building No.546, 14th cross, 14th main Road, 1st Block, Sahakara Nagara, Bengaluru and thereby allowed the owner of the above property for unauthorized construction and thus committed misconduct and dereliction of duty and hence the instant complaint before the Hon'ble Lokayukta and prayed to take action against the DGOs.

25. PW-1 in support of his contention has produced 6 documents and marked as Ex.P-1 to P6. Ex.P-1 to 3 are the Form No-I, Form No-II and complaint dated : 22/02/2016. Ex.P-4 is the building photographs. Ex.P-5 is his reply letter dated: 08/09/2016 to ARE-2. Ex.P-6 is the office copy of the orders of commissioner, BBMP, dated : 29/06/2015 to take suitable action against all the unauthorized constructions.

26. In the cross examination of PW-1 he has not specifically denied, rather admitted when a copy of the notice was shown to him and suggested that DGO-2 has issued notice U/s 308 of

KMC Act 1976 to the owner of the site No.546 on 12/01/2016. The copy of the order is confronted to him and marked as Ex.D-1.

27. He has not specifically denied to the further suggesion that on 22/03/2016 that DGO No-2 issued show cause notices U/s 321 (1) and 321(2) of KMC Act 1976 to the owner of the site No. 546 and the copies were shown, confronted and marked as Ex.D-2 and D-3. He has also not denied to the further suggession that on 01/04/2016, DGO No.2 passed confirmation order U/s 321(3) of KMC Act 1976 against the owner of site No.546 and the said confirmation order was served upon the owner and the copy of the document now shown to him is the same order. The said order was shown confronted and marked as Ex.D-4.

28. He has also not at all specifically denied to the suggession that thereafter on 4/4/2016 DGO No-2 wrote a letter to Assistant Executive Engineer, YLG 08 sub division, BESCOM, Sahakara Nagar, Bengaluru requesting to disconnect the temporary power connection given to the illegal building construction at site No.546 and the said copy of letter was confronted and marked as Ex.D-5. Thereafter on 4/4/2016 DGO-2 wrote a letter to Assistant Executive Engineer, North-03,

Sub Division, BWSSB, Bengaluru to disconnect the water supply Division to site No. 546 as per the document now shown and confronted to him and the same is marked as Ex.D-6.

29. He has also not specifically denied to the suggession that since the owner did not demolished the illegal construction, hence, DGO No-2 issued notices U/s 308, 321(1)(2)(3) of KMC Act and basing upon the report of DGO No-2, the DGO No-1 passed order U/s 462 of KMC Act on 11/5/2016 and now the said order copy shown and confronted to him and the same is marked as Ex.D-7. Thereafter DGO No-2 by his letter dated:4/5/2016 requested the BESCOM authorities to withdraw the power connection given to site No.546 and the copy of said request letter was shown and confronted to him as Ex.P-8. He has also not denied to the suggession that on 12/05/2016 the DGO No-1 and 2 had prepared an estimation cost required to demolish the unauthorized construction made at property No.546 and DGO No-1 immediately sent the estimation to the Chief Engineer, Yelahanaka, the said copy was shown and confronted as Ex.D-9.

30. He has also not denied to the suggession that DGO-2 before getting approval order, DGO-1 and 2 got transferred to other place. He also admits DGO that has lodged 30 such cases

before the Lokayukta against the BBMP officials. He also admits in clear terms that he lodged complaint to Lokayukta on 22/02/2016 and the DGO No-3 had initiated action on 12/01/2009 (prior to the present complaint). He also admits DGOs have taken timely action against the owner of property No.546 and there is no dereliction of duty or misconduct by the DGOs.

31. DGO-1 to 3 have adduced evidence as DW-1 to 3 and got confronted 11 document marked through PW-1 which is discussed with detail at above paragraphs. They have stated that they have initiated timely action against the unauthorized construction by the owner of No. 546 as per KMC Act 1976 and there is no any dereliction of duty or misconduct and their taking timely action are supported by the 'D' serious which are admitted and marked through the complainant.

32. I would like to re-produce the answer given by PW-1 in the cross examination:-

ಆ.ಸ.ನೌ 2 ರವರು ದಿನಾಂಕ:12/01/2016 ರಂದು ನಿವೇಶನ ಸಂಖ್ಯೆ:546 ರ ಮಾಲೀಕನಾದ ಮಹದೇವಯ್ಯ ಇವರಿಗೆ ಕೆಎಂಸಿ ಕಾಯ್ದೆ 1976 ರ ಕಲಂ 308ರ ಅಡಿ ನೋಟೀಸನ್ನು ಕೊಟ್ಟಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ನೋಟೀಸಿನ

ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ನೋಟೀಸಿನ ಪ್ರತಿಯನ್ನು **ನಿ.ಡಿ.1** ಎಂದು ಗುರುತಿಸಲಾಯಿತು.

ನಂತರ ಆ.ಸ.ನೌ 2 ರವರು ದಿನಾಂಕ:22/03/2016 ರಂದು ನಿವೇಶನ ಸಂಖ್ಯೆ:546 ರ ಮಾಲೀಕನಾದ ಮಹದೇವಯ್ಯ ಇವರಿಗೆ ಕೆಎಂಸಿ ಕಾಯ್ದೆ 1976 ರ ಕಲಂ 321(1)ರ ಅಡಿ ಕಾರಣ ಕೇಳುವ ನೊಟೀಸನ್ನು ಕೊಟ್ಟಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ನೋಟೀಸಿನ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ನೋಟೀಸಿನ ಪ್ರತಿಯನ್ನು **ನಿ.ಡಿ.2** ಎಂದು ಗುರುತಿಸಲಾಯಿತು.

ನಂತರ ಆ.ಸ.ನೌ 2 ರವರು ದಿನಾಂಕ:22/03/2016 ರಂದು ನಿವೇಶನ ಸಂಖ್ಯೆ:546 ರ ಮಾಲೀಕನಾದ ಮಹದೇವಯ್ಯ ಇವರಿಗೆ ಕೆಎಂಸಿ ಕಾಯ್ದೆ 1976 ರ ಕಲಂ 321(2)ರ ಅಡಿ ಕಾರಣ ಕೇಳುವ ನೊಟೀಸನ್ನು ಕೊಟ್ಟಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ನೋಟೀಸಿನ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ನೋಟೀಸಿನ ಪ್ರತಿಯನ್ನು **ನಿ.ಡಿ.3** ಎಂದು ಗುರುತಿಸಲಾಯಿತು.

ನಂತರ ಆ.ಸ.ನೌ 2 ರವರು ದಿನಾಂಕ:01/04/2016 ರಂದು ನಿವೇಶನ ಸಂಖ್ಯೆ:546 ರ ಮಾಲೀಕನಾದ ಮಹದೇವಯ್ಯ ಇವರ ವಿರುದ್ಧ ಕೆಎಂಸಿ ಕಾಯ್ದೆ 1976 ರ ಕಲಂ 321(3)ರ ಅಡಿ ಸ್ಥಿರೀಕರಣ ಆದೇಶ ಮಾಡಿ, ಅದನ್ನು ಸದರಿ ಮಾಲೀಕರಿಗೆ ಜಾರಿ ಮಾಡಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ಆದೇಶದ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ನೋಟೀಸಿನ ಪ್ರತಿಯನ್ನು **ನಿ.ಡಿ.4** ಎಂದು ಗುರುತಿಸಲಾಯಿತು.

ನಂತರ ಆ.ಸ.ನೌ 2 ರವರು ದಿನಾಂಕ:04/04/2016 ರಂದು ಎಇಇ, ವೈಎಲ್‌ಜಿ 08 ಉಪ–ವಿಭಾಗ, ಬೆಸ್ಕಾಂ ಸಹಕಾರ ನಗರ, ಬೆಂಗಳೂರು ಇವರಿಗೆ ಪತ್ರ ಬರೆದು ಸದರಿ ಸ್ವತ್ತಿನ ಸಂಖ್ಯೆ:546 ರಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ ನೀಡಲಾಗಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಕೋರಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ಪತ್ರದ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ಪತ್ರದ ಪ್ರತಿಯನ್ನು **ನಿ.ಡಿ.5** ಎಂದು ಗುರುತಿಸಲಾಯಿತು.

ನಂತರ ಆ.ಸ.ನೌ 2 ರವರು ದಿನಾಂಕ:04/04/2016 ರಂದು ಎಇಇ, ಉತ್ತರ–03 ಉಪ–ವಿಭಾಗ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬೆಂಗಳೂರು ಇವರಿಗೆ ಪತ್ರ ಬರೆದು ಸದರಿ ಸ್ವತ್ತಿನ ಸಂಖ್ಯೆ:546 ರಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ ನೀಡಲಾಗಿರುವ ನೀರಿನ ಸಂಪರ್ಕವನ್ನು ಕಡಿತಗೊಳಿಸುವಂತೆ ಕೋರಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ಪತ್ರದ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ಪತ್ರದ ಪ್ರತಿಯನ್ನು **ನಿ.ಡಿ.6** ಎಂದು ಗುರುತಿಸಲಾಯಿತು.

ಸದರಿ ಸ್ವತ್ತು ಸಂಖ್ಯೆ:546 ರ ಮಾಲೀಕರು ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡವನ್ನು ತೆರವುಗೊಳಿಸದೇ ಇದ್ದುದರಿಂದ ಕೆಎಂಸಿ ಕಾಯ್ದೆ ಕಲಂ 308, 321(1), (2) ಮತ್ತು (3) ರಡಿ ಆ.ಸ.ನೌ 2 ರವರು ಕ್ರಮ ಜರುಗಿಸಿದ ನಂತರ ಅವರು ಸಲ್ಲಿಸಿದ ವರದಿಯ ಆಧಾರದ ಮೇಲೆ ಕೆಎಂಸಿ ಕಾಯ್ದೆ ಕಲಂ 462 ರಡಿ ಸದರಿ ಕಟ್ಟಡ ತೆರವುಗೊಳಿಸುವಂತೆ ದಿನಾಂಕ:11/05/2016 ರಂದು ಆ.ಸ.ನೌ–1 ರವರು ಆದೇಶ ಮಾಡಿದ್ದರು ಮತ್ತು ಈಗ ನನಗೆ ತೋರಿಸಿದ ದಾಖಲೆ ಸದರಿ ಆದೇಶದ ಪ್ರತಿಯಾಗಿದೆ ಎಂದರೆ ಇರಬಹುದು. ಸದರಿ ಆದೇಶದ ಪ್ರತಿಯನ್ನು **ನಿ.ಡಿ.7** ಎಂದು ಗುರುತಿಸಲಾಯಿತು.

ನಂತರ ನನಗೆ ಈಗ ತೋರಿಸಿದ ದಾಖಲೆಯಂತೆ ದಿನಾಂಕ:04/05/2016 ರಂದು ಆ.ಸ.ನೌ–2 ರವರು ಸದರಿ ಸ್ವತ್ತಿನ ಸಂಖ್ಯೆ:546 ರ ಕಟ್ಟಡಕ್ಕೆ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಹಿಂಪಡೆಯುವಂತೆ ಕೋರಿ ಬೆಸ್ಕಾಂ, ಎಇಇ ರವರಿಗೆ ಪತ್ರ ಬರೆದಿದ್ದರು ಎಂದರೆ ಇರಬಹುದು. ಸದರಿ ಪತ್ರದ ಪ್ರತಿಯನ್ನು **ನಿ.ಡಿ.8** ಎಂದು ಗುರುತಿಸಲಾಯಿತು.

ಸದರಿ ಸ್ವತ್ತಿನ ಸಂಖ್ಯೆ:546 ರಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡ ತೆರವುಗೊಳಿಸಲು ತಗಲುವ ವೆಚ್ಚದ ಬಗ್ಗೆ ಆ.ಸ.ನೌ–1 ಮತ್ತು 2 ರವರು ದಿನಾಂಕ:12/05/2016 ರಂದು ಅಂದಾಜು ವೆಚ್ಚ ತಯಾರಿಸಿದ್ದರು ಎಂದರೆ ಇರಬಹುದು. ಅದರ ಪ್ರತಿಯನ್ನು **ನಿ.ಡಿ.9** ಎಂದು ಗುರುತಿಸಲಾಯಿತು.

ಈ ರೀತಿ ಬಿ.ಬಿ.ಎಂ.ಪಿ ವ್ಯಾಪ್ತಿಯ ನಿವೇಶನಗಳಲ್ಲಿ ಅಕ್ರಮ ಕಟ್ಟಡಗಳ ನಿರ್ಮಾಣದ ವಿರುದ್ಧ ನಾನು ಲೋಕಾಯುಕ್ತ ಸಂಸ್ಥೆಗೆ ಸುಮಾರು 30 ದೂರುಗಳನ್ನು ದಾಖಲಿಸಿದ್ದೇನೆ ಎಂದರೆ ಇರಬಹುದು. ಬಿ.ಬಿ.ಎಂ.ಪಿ ಯಲ್ಲಿರುವ ಟಾಸ್ಕ್ ಫೋರ್ಸ್ ಪೊಲೀಸ್ ಪಡೆ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಕರ್ತವ್ಯ ಹೊಂದಿದೆ ಎಂದರೆ ಅಭಿಯಂತರರು ಮತ್ತು ಟಾಸ್ಕ್ ಫೋರ್ಸ್ ನವರು ಸೇರಿ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಬೇಕು. ಲೋಕಾಯುಕ್ತ ಸಂಸ್ಥೆಗೆ ದೂರು ಕೊಟ್ಟ ನಂತರ ನಾನು ಸದರಿ ಅಕ್ರಮ ಕಟ್ಟಡಕ್ಕೆ ಕೊನೆಯ ಬಾರಿ ಯಾವಾಗ ಭೇಟಿ ನೀಡಿದ್ದೆ ಎಂದು ನನಗೆ ನೆನಪಿಲ್ಲ. ಸದರಿ ಅಕ್ರಮ ಕಟ್ಟಡ ಪ್ರಸ್ತುತ ತೆರವುಗೊಳಿಸಲಾಗಿದೆಯೋ ಅಥವಾ ಇಲ್ಲವೋ ಎಂದು ಗೊತ್ತಿಲ್ಲ. ಕಟ್ಟಡ ತೆರವುಗೊಳಿಸುವ ವೆಚ್ಚದ ಬಗ್ಗೆ ಅಂದಾಜು ವೆಚ್ಚ ತಯಾರಿಸಿ ಅನುಮೋದನೆಗಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡುವ ಮೊದಲೇ ಆ.ಸ.ನೌ–2 ರವರಿಗೆ ಬೇರೆ ಸ್ಥಳಕ್ಕೆ ವರ್ಗಾವಣೆಯಾಗಿತ್ತು ಎಂದರೆ ಇರಬಹುದು. ಕೆಎಂಸಿ ಕಾಯ್ದೆಯ ಅಡಿ ಆ.ಸ.ನೌ–2 ರವರು ತೆಗೆದುಕೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ಸದರಿ ಅಕ್ರಮ ಕಟ್ಟಡದ ವಿರುದ್ಧ ತೆಗೆದುಕೊಂಡಿದ್ದಾರೆ ಎಂದರೆ ಇರಬಹುದು.

ಆ.ಸ.ನೌ–1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯದಲ್ಲಿದ್ದ ನಾನು (ಆ.ಸ.ನೌ 1) ತಕ್ಷಣವೇ ಕೆಎಂಸಿ ಕಾಯ್ದೆ ಕಲಂ 462 ರಡಿ ನಿ.ಡಿ.7 ರಂತೆ ಅಕ್ರಮವಾಗಿ ನಿರ್ಮಾಣ ಮಾಡಿರುವ ಕಟ್ಟಡ ತೆರವುಗೊಳಿಸಲು ಆದೇಶ ಮಾಡಿದ್ದೆನು ಮತ್ತು ಆ.ಸ.ನೌ–2 ರವರು ಸಲ್ಲಿಸಿದ್ದ ಕಟ್ಟಡ ತೆರವುಗೊಳಿಸುವ ಅಂದಾಜು ವೆಚ್ಚವನ್ನು ಅನುಮೋದನೆಗಾಗಿ ಮುಖ್ಯ ಅಭಿಯಂತರರು, ಯಲಹಂಕ ಇವರಿಗೆ ತಕ್ಷಣವೇ ಕಳುಹಿಸಿಕೊಡಲಾಗಿತ್ತು ಎಂದರೆ ಇರಬಹುದು. ನಂತರ ನನಗೆ ದಿನಾಂಕ : 30/10/2016 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿ ಬೇರೆ ಸ್ಥಳಕ್ಕೆ ವರ್ಗಾವಣೆಯಾಗಿ ಹೋಗಿದ್ದೆ ಎಂದರೆ ಇರಬಹುದು.

ಆ.ಸ.ನೌ–3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ನೀವು ದಿನಾಂಕ: 22/02/2016 ರಂದು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವಿರಿ ಎಂದರೆ ಸರಿ. ದಿನಾಂಕ : 12/01/2016 ರಂದೇ ನಾನು (ಆ.ಸ.ನೌ–3) ನಿ.ಡಿ.1 ರ ನೋಟೀಸು ತಯಾರಿಸಿ, ಅದನ್ನು ಆ.ಸ.ನೌ–2 ರವರ ಮೂಲಕ ಸದರಿ ಅಕ್ರಮ ಕಟ್ಟಡ ಮಾಲೀಕರಿಗೆ ನೋಟೀಸು ಕಳುಹಿಸಲು ಕ್ರಮ ಜರುಗಿಸಿದ್ದೆ ಎಂದರೆ ಇರಬಹುದು. ನನಗೆ ವರ್ಗಾವಣೆಯಾಗಿದ್ದರಿಂದ ನಾನು ದಿನಾಂಕ:22/02/2016 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿದ್ದೆ ಎಂದರೆ ಇರಬಹುದು. ಸದರಿ ಅಕ್ರಮ ಕಟ್ಟಡದ ವಿರುದ್ಧ ಕ್ರಮ ಕೈಗೊಳ್ಳದೇ ಇರುವ ಬಗ್ಗೆ ನನ್ನ ತಪ್ಪು ಇರುವುದಿಲ್ಲ ಎಂದರೆ ಇರಬಹುದು.

33. Thus PW-1 though alleges misconduct and dereliction of duty by the DGOs but in the cross examination he has given go-bye to his allegation. He has clearly admitted that the DGOs have initiated timely action against the owner of property No. 546 as per the KMC Act. They have initiated action even prior

to the complaint before this Lokayukta authority and PW-1 clearly admits since DGOs have taken timely action, hence there is no misconduct or dereliction of duty by the DGO.

34. When there is such clear admission and statement by the complainant before this authority, we can safely arrive to the defanate conclusion that the complainant has filed this false complaint due to some vengeance/ill will. Moreover, PW-1 has admitted in his cross examination that he has filed many such type of cases before the Lokayukta against the BBMP authorities. From this statement of PW-1, it can be said PW-1 is not a trust worthy person but can be said he is a habitual person, and in the habit of filing false complaints. Hence, careful perusal of oral and document materials, I hold that the Disciplinary authority has utterly failed to prove the charge leveled against the DGOs.

35. **Point No.2** : In view of the same I am inclined to answer Point No-1 is **Negative**, this ARE-13 proceed to record the following:-

## FINDINGS

The Disciplinary Authority has failed to prove the charges leveled against the DGO-1 Sri. Yerappa Reddy, Executive Engineer, Bytaranapura Division, DGO-2 Sri. Rajanikanth Malli, Assistant Executive Nagara BBMP Office, Bengaluru Urban District, DGO No-3 Sri. Basavaraj, Assistant Engineer, Sahakara Nagara BBMP Office, Bengaluru Urban District .

This report is submitted to Hon'ble Upalokayukta-1 in a sealed cover for kind perusal and for further action in the matter.

29/6

**(Shobha S)**
Additional Registrar (Enquiries-13)
Karnataka Lokayukta,
Bengaluru.

# :: A N N E X U R E ::

| | |
|---|---|
| **File 3** | **Witness examined on behalf of the Disciplinary Authority** |
| | **PW-1:** Sri. Pragathi K Venkateshbabu (Original) |
| | **Witness examined on behalf of the Defence** |
| | **DW-1:** Sri. H.V. Yarrappa Reddy (Original) |
| | **DW-2:** Sri. Rajanikanth (Original) |
| | **DW-3:** Sri. Basavaraju (Original) |
| **File 4** | **Documents marked on behalf of the Disciplinary Authority** |
| | **Ex. P-1**: Form No-I (Original)<br>**Ex. P-1(a)** : Signature of the complainant. |
| | **Ex.P-2:** Form No-II (Original)<br>**Ex. P-2(a)** : Signature of the complainant. |
| | **Ex. P-3:** Complaint (Original)<br>**Ex. P-3(a)** : Signature of the complainant. |
| | **Ex. P-4**: Photographs (Original) |
| | **Ex. P-5**: Rejoinder of the complainant (Original)<br>**Ex. P-5(a)** : Signature of the complainant. |
| | **Ex. P-6**: The Commissioner, BBMP Office order dated: 29/06/2019 (Xerox) |
| | **Documents marked on behalf of the DGO** |
| | **Ex.D-1:** The Assistant Executive Engineer, Kodigehalli Sub Division, BBMP, Bengaluru Letter to Mahadevappa dated: 12/01/2016 (xerox) |

| | |
|---|---|
| | **Ex.D-2:** BBMP, Byatarayanapura Division, Kodigehalli Division dated: 22/03/2016 letter to under section 321(1) of KMC Act to the owner of the building (Xerox) |
| | **Ex.D-3:** The Assistant Executive Engineer, Kodigehalli Sub Division, BBMP, Bengaluru letter to Mahadevappa under section 321(1) KMC Act Dated: 22/03/2016 (xerox) |
| | **Ex.D-4:** The Assistant Executive Engineer, Kodigehalli Sub Division, BBMP, Bengaluru letter to Mahadevappa under section 321(3) KMC Act 1976 dated: 01/04/2016 (Xerox) |
| | **Ex.D-5:** The Assistant Executive Engineer, Kodigehalli Sub Division, BBMP, Bengaluru letter to Assistant Executive Engineer, BESCOM, Sahakaranagara, Bengaluru dated: 04/04/2016 (Xerox) |
| | **Ex.D-6:** The Assistant Executive Engineer, Kodigehalli Sub Division, BBMP, Bengaluru letter to Assistant Executive Engineer, BWSSB, Bengaluru dated :04/04/2016(Xerox) |
| | **Ex.D-7:** The Executive Engineer, Byataranayapura Division, BBMP, Bengaluru Order under section 462 of KMC Act 1976 dated:11/05/2016 (Xerox) |
| | **Ex.D-8:** The Assistant Executive Engineer, Kodigehalli Sub Division, BBMP, Bengaluru letter dated:4/5/2016 addressed to Assistant Executive Engineer (E), 8th Central Sub Division, Sahakaranagara, Bengaluru (Xerox) |
| | **Ex.D-9:** BBMP work estimation for removal of deviated portion of sanction of building (Xerox) |
| | **Ex.D-10:** BBMP Office Note sheets (Xerox) |
| | **Ex.D-11:** The KAT Order dated: 15/11/2017 in Application No.1062/2017 (Xerox) |

| | |
|---|---|
| | **Ex.D-12:** The Assistant Executive Engineer, Yalahanka range, Kodigehalli Sub Division, BBMP, Bengaluru order dated :4/5/2012 (xerox) |
| | **Ex.D-13:** The Assistant Executive Engineer, Kodigehalli Sub Division, BBMP, Bengaluru office order dated: 22/02/2016 (Original) |

29/6

**(Shobha S)**
Additional Registrar Enquiries-13
Karnataka Lokayukta,
Bangalore.